ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 28/2010**

**ಪ್ರಾಸಾ- 39 ಚಾಸಾ- 48**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ನಾಗರಾಜ ಎಸ್ |
| ತಂದೆಯ ಹೆಸರುಃ | : | ಲೇಟ್ ಸಿದ್ದಯ್ಯ |
| ವಯಸ್ಸುಃ | : | 54 ವರ್ಷ |
| ಉದ್ಯೋಗಃ | : | ಡೆಪ್ಯುಟಿ ಡ್ರಗ್ಸ್ ಕಂಟ್ರೋಲರ್, ರೀಜನಲ್ ಕಛೇರಿ, ಬೆಳಗಾವಿ |
| ವಾಸ | : | ಬೆಳಗಾವಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 30-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 18-7-2009ರಿಂದ 11-10-2013ರವರೆಗೆ ಹಾಸನ ವೃತ್ತದ ಸಹಾಯಕ ಔಷಧ ನಿಯಂತ್ರಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 3-11-2009ರಂದು ಸಕಲೇಶಪುರ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರು Bupregesic injection ಎನ್ ಡಿ ಪಿ ಎಸ್ ಕಾಯಿದೆಯಡಿ ಬರುತ್ತದೆಯೇ ಎಂದು ಕೇಳಿದ್ದರು. ನಾನು ಅದೇ ದಿನಾಂಕದಂದು ನನ್ನ ಅಭಿಪ್ರಾಯವನ್ನು ನೀಡಿ ಸದರಿ ಔಷಧ ಎನ್ ಡಿ ಪಿ ಎಸ್ ಕಾಯಿದೆಯಡಿ ಬರಬಹುದು ಎಂದು ತಾತ್ಕಾಲಿಕ ಅಭಿಪ್ರಾಯವನ್ನು ಈಗ ತೋರಿಸಿದ ದಾಖಲೆಯಂತೆ ನೀಡಿರುತ್ತೇನೆ. ಅದನ್ನು ನಿಪಿ-80 ಎಂದು ಸಾಕ್ಷಿಯ ರುಜುವನ್ನು ನಿಪಿ-80(ಎ) ಎಂದು ಗುರುತಿಸಲಾಯಿತು.

3.ದಿನಾಂಕ 10-11-2009ರಂದು ಪೊಲೀಸ್ ಉಪಾಧೀಕ್ಷಕರು ಸಕಲೇಶಪುರದ ಮೆಸರ್ಸ್ ಎನ್

ಎಸ್ ಮೆಡಿಕಲ್ಸ್ ನ ಪರವಾನಿಗೆಯನ್ನು ರದ್ದುಪಡಿಸಲಾಗಿದೆಯೇ ಎಂದು ಮಾಹಿತಿ ಕೋರಿದ್ದರು. ಅದರಂತೆ ನಾನು ಅದೇ ದಿನಾಂಕದಂದು ಈಗ ತೋರಿಸಿದ ದಾಖಲೆಯಂತೆ ಪರವಾನಿಗೆಯನ್ನು ರದ್ದುಪಡಿಸಲಾಗಿದೆ ಎಂದು ತಿಳಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-81 ಎಂದು ಸಾಕ್ಷಿಯ ರುಜುವನ್ನು ನಿಪಿ-81(ಎ) ಎಂದು ಗುರುತಿಸಲಾಯಿತು.

4.ನಂತರ ದಿನಾಂಕ 21-1-2010ರಂದು ಬೆಂಗಳೂರು ಸಿ ಎ ದಳ ಸಿ ಐ ಡಿ ಇವರ ಪೊಲೀಸ್ ಉಪಾಧೀಕ್ಷಕರು Bupregesic injection ಔಷಧದಲ್ಲಿ ಎಷ್ಟು ಪ್ರಮಾಣದ Buprenorphine ಇದೆ ಎಂದು ಕೇಳಿದ್ದರು. ಅದೇ ದಿನಾಂಕದಂದು ನಾನು ಈಗ ನೊಡುತ್ತಿರುವ ದಾಖಲೆಯಂ ತೆ ನನ್ನ ಅಭಿಪ್ರಾಯವನ್ನು ನೀಡಿ ಅದರಲ್ಲಿ ಒಂದು ಆ್ಯಂಪ್ಯುಲ್ ನಲ್ಲಿ 0.6ಎಂ ಜಿ Buprenorphine ಇರುವುದಾಗಿ ತಿಳಿಸಿರುತ್ತೇನೆ ಮತ್ತು ಅವರು ಖರೀದಿಸಿದ್ದ 82,800 ಆ್ಯಂಪ್ಯುಲ್ ಗಳಲ್ಲಿ 49.68ಗ್ರಾಂ buprenorphine ಇರುವುದಾಗಿ ಅಭಿಪ್ರಾಯಪಟ್ಟಿರುತ್ತೇನೆ. ಸದರಿ ದಾಖಲೆಯನ್ನು ನಿಪಿ-82 ಎಂದು ಸಾಕ್ಷಿಯ ರುಜುವನ್ನು ನಿಪಿ-82(ಎ) ಎಂದು ಗುರುತಿಸಲಾಯಿತು. Buprenorphine ಮತ್ತು ಬರುವ ಅಂಶವಾಗಿರುತ್ತದೆ.

**ಪಾಟೀಸವಾಲುಃ 1ನೇ ಆರೋಪಿ ಪರ ಶ್ರೀ ಎ ಹೆಚ್ ಬಿ ವಕೀಲರಿಂದಃ**

ಒಂದಿದು ಆ್ಯಂಪ್ಯುಲ್ ಎಂದರೆ 2 ಎಂ ಎಲ್. ಆ ಸಮಯದಲ್ಲಿ ನಾನು ಹಾಸನ ಜಿಲ್ಲೆಯ ಪ್ರಭಾರದಲ್ಲಿದ್ದೆನು. ಹಾಸನ ಜಿಲ್ಲೆಯಲ್ಲಿ ಇದ್ದಂತಹ ಮೆಡಿಕಲ್ ಶಾಪ್ ಗಳನ್ನು ಪರಿಶೀಲಿಸುವಂತಹ ಅಧಿಕಾರ ನನಗೆ ಇತ್ತು. ನಾನು ಎಸ್ ಎಸ್ ಮೆಡಿಕಲ್ಸ್ ನ ಪರವಾನಿಗೆ ರದ್ದುಪಡಿಸುವುದಕ್ಕಿಂತ ಮುಂಚೆ ಕೂಡ ಸದರಿ ಮೆಡಿಕಲ್ಸ್ ಗೆ ಭೇಟಿ ಕೊಟ್ಟಿರುತ್ತೇನೆ. ನಾನು ಆ ರೀತಿ ಭೇಟಿ ಕೊಟ್ಟಾಗಲೆಲ್ಲಾ ಸದರಿ ಮೆಡಿಕಲ್ಸ್ ನಲ್ಲಿ ಯಾವುದೇ irregularity ಇರುವುದು ಕಂಡುಬಂದಿರಲಿಲ್ಲ. Bupregesic ಒಂದು ನೋವುನಿವಾರಕ ಔಷಧ ಎಂದರೆ ಸರಿ. ಯಾವುದೇ ಮೆಡಿಕಲ್ ಶಾಪ್ ನವರು ಇಂಡೆಂಟ್ ಹಾಕಿದರೆ ಅದನ್ನು ಸರಬರಾಜು ಮಾಡುತ್ತಾರೆ ಎಂದರೆ ನಿಜ. ಮೆಡಿಕಲ್ಸ್ ಶಾಪ್ ನವರು ಖರೀದಿಸಲು ಅದಕ್ಕೆ ವೈದ್ಯರ ಚೀಟಿ ಅಗತ್ಯವಿರುವುದಿಲ್ಲ ಎಂದರೆ ನಿಜ.

**ಪಾಟೀಸವಾಲುಃ** 2ನೇ **ಆರೋಪಿ ಪರ** ಶ್ರೀ ಜೆ ಎಸ್ **ವಕೀಲರಿಂದಃ**

(ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ, ಅನುಮತಿಸಿದೆ).

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**